**ನಿತ್ಯಾನಂದ ಬಿ ಶೆಟ್ಟಿ**
**ಹಿರಿಯ ಪ್ರಾಧ್ಯಾಪಕ**
**ಡಿವಿಜಿ ಕನ್ನಡ ಅಧ್ಯಯನ ಕೇಂದ್ರ**
**ತುಮಕೂರು ವಿಶ್ವವಿದ್ಯಾನಿಲಯ-ತುಮಕೂರು. 572103.**
**9901863961**
nbshetty73@gmail.com

ತುಮಕೂರು ವಿಶ್ವವಿದ್ಯಾನಿಲಯದ ಡಿವಿಜಿ ಕನ್ನಡ ಅಧ್ಯಯನ ಕೇಂದ್ರದಲ್ಲಿ ಹಿರಿಯ ಪ್ರಾಧ್ಯಾಪಕರಾಗಿರುವ ನಿತ್ಯಾನಂದ ಬಿ ಶೆಟ್ಟಿಯವರು ಈ ಹಿಂದೆ ಮೂಡುಬಿದಿರೆಯ ಪ್ರತಿಷ್ಠಿತ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಪದವಿ ಕಾಲೇಜ್ ನಲ್ಲಿ 1997ರಿಂದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ, ಕಲಾ ನಿಕಾಯದ ಡೀನ್ ಆಗಿ ಕೆಲಸ ನಿರ್ವಹಿಸಿದ್ದಾರೆ. https://alvas.org

ಮಂಗಳೂರು ವಿಶ್ವವಿದ್ಯಾನಿಲಯದಿಂದ ***ಕನ್ನಡ ಸಂಸ್ಕೃತಿ ವಾಙ್ಮಯ*** ಎಂಬ ಸಂಶೋಧನ ಸಮಸ್ಯೆಯ ಕುರಿತು ಪಿಎಚ್. ಡಿ ಪಡೆದಿರುವ ಇವರು ಈ ಮಹಾಪ್ರಬಂಧದಲ್ಲಿ ***ಆಲೂರು ವೆಂಕಟರಾವ್, ಹರ್ಡೇಕರ್ ಮಂಜಪ್ಪ, ಶಂಬಾ ಜೋಷಿ, ಡಿ ವಿ ಗುಂಡಪ್ಪ, ಚಿದಾನಂದ ಮೂರ್ತಿ*** ಯವರನ್ನು ವಿಶೇಷ ಅಧ್ಯಯನ ಮಾಡುತ್ತ ಯಾವ ಬಗೆಯ ಕರ್ನಾಟಕತ್ವ ಈ ಧೀಮಂತರ/ಸಂಶೋಧಕರ ಚಿಂತನೆಯಲ್ಲಿ ಪ್ರತಿಫಲಿಸುತ್ತದೆ ಎಂಬುದರ ಶೋಧವನ್ನು ನಡೆಸಿದ್ದಾರೆ.

ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನ, ಕನ್ನಡ ಅಧ್ಯಯನ, ಸಿನಿಮಾ ಅಧ್ಯಯನ,ಅಭಿಜಾತ ಪರಂಪರೆಯ ಪಠ್ಯಗಳ ತತ್ತ್ವಜ್ಞಾನೀಯ ಅಧ್ಯಯನ, ಆಧುನಿಕ ಪೂರ್ವ ಮತ್ತು ಆಧುನಿಕ ವಾಙ್ಮಯಗಳ ರಾಜಕೀಯ ಓದು, ಕನ್ನಡ ಸಾಹಿತ್ಯದ ಸಂಶೋಧನ ಮೀಮಾಂಸೆ ನಿತ್ಯಾನಂದ ಬಿ ಶೆಟ್ಟಿಯವರ ಶೈಕ್ಷಣಿಕ ಆಸಕ್ತಿಯ ಪ್ರಮುಖ ಕ್ಷೇತ್ರಗಳಾಗಿವೆ.

ಕನ್ನಡದ ವಿದ್ವತ್ ಲೋಕದ ಮುಂಚೂಣಿಯಲ್ಲಿರುವ ***ಲೋಕಜ್ಞಾನ*** ಎಂಬ ಸಂಶೋಧನ ಪತ್ರಿಕೆಯ ಸಂಪಾದಕರಾಗಿ ಇವರು ಇದುವರೆಗೆ ಒಟ್ಟು 33 ಸಂಚಿಕೆಗಳನ್ನು ಹೊರತಂದಿದ್ದಾರೆ.(2024) ***ಲೋಕಜ್ಞಾನ*** ಯುಜಿಸಿ ಕೇರ್ ಲಿಸ್ಟೆಡ್ ಜರ್ನಲ್ ಕೂಡ ಆಗಿದೆ. ನಿತ್ಯಾನಂದ ಬಿ ಶೆಟ್ಟಿಯವರ ಅನೇಕ ಲೇಖನಗಳು ***ಹೊಸಮನುಷ್ಯ, ಹೊಸತು, ಸಮಾಜಮುಖಿ, ಸಂವಾದ, ಅಕ್ಷರ ಸಂಗಾತ*** ಇತ್ಯಾದಿ ವಿದ್ವತ್ ಗಾಂಭೀರ್ಯ ಇರುವ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಹಾಗೆಯೇ ***ವಾರ್ತಾಭಾರತಿ*** ಪತ್ರಿಕೆಯ ವಿಶೇಷಾಂಕದಲ್ಲಿ, ***ಪ್ರಜಾವಾಣಿ ದೈನಿಕ***ದಲ್ಲಿ ಇವರ ಅನೇಕ ಲೇಖನಗಳು ಪ್ರಕಟಗೊಂಡಿವೆ.

ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ ಪ್ರಕಟಿಸಿರುವ ***ಸೆಲೆಬ್ರೇಟಿಂಗ್ ದಿ ಸಿಟಿ: ಕೋಲ್ಕತಾ ಇನ್ ಇಂಡಿಯನ್ ಲಿಟರೇಚರ್*** ( ಸಂಪಾದಕ: ಸಯಂತನ್ ದಾಸ್ ಗುಪ್ತಾ) ಪುಸ್ತಕದಲ್ಲಿ ಹೈದರಾಬಾದ್ ನ ಕೇಂದ್ರೀಯ ವಿಶ್ವವಿದ್ಯಾನಿಲಯದ ಪ್ರೊ. ಶಿವರಾಮ ಪಡಿಕ್ಕಲ್ ರವರ ಜೊತೆಯಾಗಿ ಇವರು ಬರೆದಿರುವ ***" ದಿ ಇಮೇಜಸ್ ಆಫ್ ಬೆಂಗಾಲ್, ಬಾಂಗ್ಲಾ ಆಂಡ್ ಕೋಲ್ಕತಾ ಥ್ರೂ ದ ಲೆನ್ಸ್ ಆಫ್ ಕನ್ನಡ"*** (ಕನ್ನಡದ ಕನ್ನಡಿಯಲ್ಲಿ ಬಂಗಾಲದ ರೂಪು-ರೇಖೆ) ಲೇಖನ ಪ್ರಕಟಗೊಂಡಿದೆ. (2021) ಹಾಗೆಯೇ ಕೇರಳದ ***ಅಚ್ಯುತ ಮೆನನ್ ಫೌಂಡೇಶನ್*** ಪ್ರಕಟಿಸಿರುವ ***ಸೋಶಿಯಲ್ ಸೈನ್ಸ್ ಇನ್ ಪರ್ಸ್ಪೆಕ್ಟಿವ್*** ಪತ್ರಿಕೆಯಲ್ಲಿ ಇವರ ***"ರೀ-ವಿಸಿಟಿಂಗ್ ಗಾಂಧಿ ಆಂಡ್ ಸಾವರ್ಕರ್"*** (ಸಹಲೇಖಕ: ಪ್ರೊ. ರಾಜಾರಾಮ ತೋಳ್ಪಾಡಿ) ಲೇಖನ ಪ್ರಕಟಗೊಂಡಿದೆ. (2020)

ಡಾ. ಎಂ ಚಂದ್ರಪೂಜಾರಿಯವರ ಜೊತೆ ಸೇರಿ ಇವರು ಬರೆದಿರುವ ***ಕರಾವಳಿ ಕರ್ನಾಟಕದ ಕೋಮುವಾದ*** ಪುಸ್ತಕವನ್ನು ***ಕನ್ನಡ ವಿಶ್ವವಿದ್ಯಾನಿಲಯ, ಹಂಪಿ*** ಪ್ರಕಟಿಸಿದೆ.(2010) ***ಸಮಾನತೆಯ ಸಂತ: ಬಿ ವಿ ಕಕ್ಕಿಲಾಯ*** ಪುಸ್ತಕವನ್ನು ***ಕನ್ನಡ ಸಂಘ, ಕಾಂತಾವರ, ಕಾರ್ಕಳ-ಉಡುಪಿ*** ಇವರು ಪ್ರಕಟಿಸಿದ್ದಾರೆ. ತೆಂಕುತಿಟ್ಟು ಯಕ್ಷಗಾನದ ಮಹೋನ್ನತ ಪ್ರತಿಭೆ ಅಳಿಕೆ ರಾಮಯ್ಯ ರೈಗಳ ಕುರಿತು

ನಿತ್ಯಾನಂದ ಬಿ ಶೆಟ್ಟಿಯವರು ಬರೆದ ಪುಸ್ತಕವನ್ನು ***ದೆಹಲಿ ಮಿತ್ರ ಪ್ರಕಾಶನ, ನವದೆಹಲಿ*** ಪ್ರಕಟಿಸಿದೆ.(2011)

ನಾಡಿನ ಹೆಸರಾಂತ ವಿದುಷಿ ಪ್ರೊ. ಕಪಿಲಾ ವಾತ್ಸಾಯನ ಸಂಪಾದಿಸಿದ ಮತ್ತು ***ಇಂದಿರಾಗಾಂಧಿ ರಾಷ್ಟ್ರೀಯ ಕಲಾಕೇಂದ್ರ, ನವದೆಹಲಿ*** ಪ್ರಕಟಿಸಿದ ***ಕಲಾತತ್ತ್ವಕೋಶ- ಭಾರತೀಯ ರಂಗಕಲೆಗಳ ಮೂಲಭೂತ ಪರಿಕಲ್ಪನೆಗಳ ವಿವರಣ ಕೋಶ*** ದ ಮೊದಲ ನಾಲ್ಕು ಸಂಪುಟಗಳನ್ನು ಕನ್ನಡಕ್ಕೆ ತರುವ ಮಹತ್ವದ ಯೋಜನೆಯ ಸಂಪಾದಕರಾಗಿ ನಿತ್ಯಾನಂದ ಬಿ ಶೆಟ್ಟಿ ಕಾರ್ಯನಿರ್ವಹಿಸಿದ್ದಾರೆ ಮತ್ತು ಈ ಸಂಪುಟಗಳನ್ನು ತುಮಕೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗ ಪ್ರಕಟಿಸಿದೆ.(2014) ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರ ***ಸಾಹಿತ್ಯ ಸಂಶೋಧನೆ*** ಪುಸ್ತಕವನ್ನು 2021ರಲ್ಲಿ ಪ್ರಕಟಿಸಿದೆ.

ಇವರ ***ಮಾರ್ಗಾನ್ವೇಷಣೆ*** ಪುಸ್ತಕವು (2021) ಕನ್ನಡ ಸಂಶೋಧನ ಮೀಮಾಂಸೆಗೆ ಸಂಬಂಧಿಸಿದ ಅತ್ಯಂತ ವಿಶಿಷ್ಟವಾದ ಪುಸ್ತಕವಾಗಿದ್ದು, ಸೃಜನಶೀಲ ಕೃತಿಯ ಓದಿನ ಸುಖದ ಜೊತೆಗೆ ಗಹನ ತತ್ತ್ವಜ್ಞಾನೀಯ ಜಿಜ್ಞಾಸೆಯನ್ನು ನಡೆಸುವಂತಹ ಕೃತಿಯಾಗಿದೆ. ಈ ಕೃತಿಗೆ ***ಶಿವರಾಮ ಕಾರಂತ ಪ್ರತಿಷ್ಠಾನ(ರಿ.)*** **ಮೂಡುಬಿದಿರೆ** ಇವರು ನೀಡುವ ***ಶಿವರಾಮ ಕಾರಂತ ಪ್ರಶಸ್ತಿ*** ಬಂದಿದೆ.(2024) ಇವರ ಅಂಕಣ ಬರೆಹಗಳಿಗೆ ***ಕನ್ನಡ ಸಂಘ , ಮಂಡ್ಯ ಇವರು ನೀಡುವ ಹಾ ಮಾ ನಾಯಕ ಪ್ರಶಸ್ತಿ*** ಬಂದಿದೆ.(2023)

**Nithyananda B Shetty**
**Senior Professor**
**DVG Kannada Study Centre ( Department of Studies and Research in Kannada)**
**Tumkur University,**
**Tumakuru . 572103**
**Cell: 9901863961 Email: nbshetty73@gmail.com**

Nithyananda B Shetty is presently Senior Professor of Kannada Studies at Tumkur University. Before joining Tumkur University, he was teaching at Alva's Education Foundation, Moodubidri. https://alvas.org

He holds a PhD degree for his study on ***Cultural Discourse in Kannada (ಕನ್ನಡ ಸಂಸ್ಕೃತಿ ವಾಙ್ಮಯ)*** from Mangalore University.

His core areas of studies are Literature and Culture Studies, Kannada Studies, Film Studies and Philosophical Study of Classical Literary Texts. He has also been working on the areas of Kannada-Tulu Literature and engaged in the theoretical and methodological issues of social research. He has published in the areas of Cultural history, Research in Literature and Humanities. He has been the editor of UGC-Care Listed Journal, Loka Jnana-(Journal of Human Sciences) it's a peer reviewed inter disciplinary tri-annual journal in Kannada. He has published academic paper titled Re-visiting Gandhi and Savarkar in the Social Science in Perspective, Published by C. Achutha Menon Study Centre and Library, Thiruvananthapuram with Professor Rajarama Tolpadi, Celebrating the City Kolakata in Indian Literature, Published by Kendra Sahitya Academi, New Delhi with Professor Shivarama Padikkal.

He is the author of Maarganveshane- a book on, an introduction to Kannada literary research and research methodology. He has edited the Kannada version of Kalatatvakosha, (a four volume lexicon of fundamental concepts in Indian Arts edited by Professor Kapila Vatsyayana)

Electronic Address:

https://tumkuruniversity.academia.edu/NityanandBShetty
https://vidwan.inflibnet.ac.in/profile/355853
linkedin.com/in/nithyananda-b-shetty-30a0ab49